**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ**

ಸ್ಪೆಷಲ್ ಕೇಸ್ ನಂಃ 117/2019 ಪಿ.ಡಬ್ಲ್ಯುಃ 4

ಸಿ.ಡಬ್ಲ್ಯುಃ 4

| | |
|---|---|
| ಸಾಕ್ಷಿದಾರರ ಹೆಸರು | ಅಂತೋನಿ ಡಿಸೋಜಾ |
| ತಂದೆಯ ಹೆಸರು | ಅಲ್ಪೋರ್ಡ್ ಡಿಸೋಜಾ |
| ವಯಸ್ಸು | 42 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಿಳಾಸ | ನರ್ನಾಡು, ಮದಗ, ತೆಂಕಬೆಟ್ಟು, ಉಡುಪಿ |

ದಿನಾಂಕಃ 11-12-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನನಗೆ ಸಹ ಪಂಚ ಚಾಸಾ -3 ಈತನ ಪರಿಚಯ ಇರುತ್ತದೆ. ನನಗೆ ಚಾಸಾ -2 ಇವರ ಪರಿಚಯ ಇರುವುದಿಲ್ಲ ಮತ್ತು ಇಲ್ಲಿಯವರೆಗೆ ನೋಡಿರುವುದಿಲ್ಲ. ಇಂದು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಹ ಈ ಮೊದಲು ನೋಡಿರುವುದಿಲ್ಲ.

2) ಈಗ ಸುಮಾರು 4 ವರ್ಷಗಳ ಹಿಂದೆ ಸಿಇಎನ್ ಪೊಲೀಸರು ನನ್ನನ್ನು ಮತ್ತು ಸಹ ಪಂಚನನ್ನು ಮಧ್ಯಾಹ್ನ 2 ಗಂಟೆಗೆ ಠಾಣೆಗೆ ಕರೆಸಿರುತ್ತಾರೆ. ತಕ್ಷಣ ಅಲ್ಲಿಂದ ಜೀಪಿನಲ್ಲಿ ನಮ್ಮನ್ನು ಪೊಲೀಸರು ಬಡಗಬೆಟ್ಟುವಿನ ಹತ್ತಿರ ಇರುವ ಮಣಿಪಾಲದ ಒಂದು ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತಾರೆ. ನಾವು ಹೋದ ಸ್ಥಳ ಯಾವುದು ಎಂದು ನನಗೆ ಗೊತ್ತಿರುವುದಿಲ್ಲ. ಅಲ್ಲಿ ಪೊಲೀಸರು ನಮ್ಮನ್ನು ನಿಲ್ಲಿಸಿ ಪೋಟೋ ತೆಗೆದು, ಮರಳಿ ಠಾಣೆಗೆ ಬಂದಿರುತ್ತೇವೆ. ಈಗ ನೋಡಿದ ನಿಪಿ-3, 4 ಮತ್ತು 5 ಮೇಲೆ ಇರುವ ಸಹಿಗಳನ್ನು ಹಾಗೂ ಎಂಒ-3 ರ ಮೇಲೆ ಇರುವ ಚೀಟಿಯ ಮೇಲೆ ಇರುವ ಸಹಿಗಳನ್ನು ಠಾಣೆಗೆ ಬಂದ ನಂತರ ಮಾಡಿರುತ್ತೇನೆ. ಸಾಕ್ಷಿ ಸಹಿಯನ್ನು ನಿಪಿ-4(ಸಿ) ಎಂದು ಗುರುತಿಸಿತು. ಈಗ ನೋಡಿದ ನಿಪಿ 7, 8 ಮತ್ತು 10 ಪೋಟೋಗಳಲ್ಲಿ ನಾನು ಮತ್ತು ಸಹ ಪಂಚರು ಕಂಡುಬರುತ್ತೇವೆ.

3) ಇಂದು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ತಮ್ಮ ಮುಂದೆ ಹಿಡಿದು, ವಿಚಾರಿಸಿ ಗಾಂಜಾ ವಶಪಡಿಸಿಕೊಂಡಿದ್ದು ಇರುವುದಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

**( ಈ ಹಂತದಲ್ಲಿ ಸರಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಸರಕಾರಿ ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

**ಪಾಟೀಸವಾಲುಃ ಸರಕಾರಿ ಅಭಿಯೋಜಕರಿಂದಃ**

1) ದಿನಾಂಕ 23-05-2018 ರಂದು ಸಂಜೆ 3-45 ಕ್ಕೆ ಚಾಸಾ -1 ನನನ್ನು ಮತ್ತು ಸಹ ಪಂಚನನ್ನು ಠಾಣೆಗೆ ಕರೆಯಿಸಿ ನಿಪಿ-3 ರಂತೆ ನೋಟಿಸು ಕೊಟ್ಟಿದ್ದನ್ನು ಪಡೆದುಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ಆ ಸಮಯದಲ್ಲಿ ಠಾಣೆಯಲ್ಲಿ ಚಾಸಾ -2 ಇದ್ದರು ಎನ್ನುವುದು ಸರಿಯಲ್ಲ. ಸದರಿ ಸಮಯಲ್ಲಿ ಗಾಂಜಾ ದಾಳಿಗೆ ಸಹಕರಿಸಲು ಚಾಸಾ -1 ನಮ್ಮನ್ನು ಕೇಳಿದ್ದರು ಎನ್ನುವುದು ಸರಿಯಲ್ಲ. ಸಂಜೆ 4 ಗಂಟೆಗೆ ನಾನು, ಸಹ ಪಂಚ, ಚಾಸಾ-1, 2 ಮತ್ತು ಇತರೇ ಪೊಲೀಸ್ ಸಿಬ್ಬಂದಿಗಳೊಡನೆ ಈಶ್ವರ ನಗರದ 2 ನೇ ಮುಖ್ಯರಸ್ತೆಯಲ್ಲಿರುವ ರೀಗಲ್ ಹಿಲ್ಸ ಅಪಾರ್ಟಮೆಂಟ್ ಗೆ ಒಂದು ಇಲಾಖ ವಾಹನ ಮತ್ತು ಖಾಸಗಿ ವಾಹನದಲ್ಲಿ ಹೋಗಿ ತಲುಪಿದೆವು ಎನ್ನುವುದು ಸರಿಯಲ್ಲ. ನಾವು ನೋಡಿದಾಗ ರಸ್ತೆಯ ಬಲಬದಿಯಲ್ಲಿ ಇಂದು ನ್ಯಾಯಾಲಯದ ಮುಂದೆ ಇರುವ ಆರೋಪಿ ನೀಲಿ ಬಣ್ಣದ ಶೋಲ್ಡರ್ ಬ್ಯಾಗ್ ಹಿಡಿದು ನಿಂತವನು ಪೊಲೀಸರನ್ನು ನೋಡಿ ತಮ್ಮ ವಿರುದ್ಧ ದಿಕ್ಕಿನಲ್ಲಿ ಓಡಲು ಆರಂಭಿಸಿದನು ಎನ್ನುವುದು ಸರಿಯಲ್ಲ.

2) ಆಗ ಆರೋಪಿಯನ್ನು ಪೊಲಿಸೀರು ಬೆನ್ನು ಹತ್ತಿ , ಸುತ್ತುವರಿದು ಹಿಡಿದುಕೊಂಡು ವಿಚಾರಿಸಿದಾಗ ತನ್ನ ಹೆಸರು, ವಿಳಾಸವನ್ನು ಮತ್ತು ಉದ್ಯೋಗವನ್ನು ಹೇಳಿ ಉತ್ತರಪ್ರದೇಶದ ತನ್ನ ಊರಿನಿಂದ ಮಣಿಪಾಲದ ವಿದ್ಯಾರ್ಥಿಗಳಿಗೆ ಮಾರಾಟ ಮಾಡಲು ಗಾಂಜಾ ತಂದಿದ್ದು ಚೀಲದಲ್ಲಿ ಇರುತ್ತದೆ ಎಂದು ಒಪ್ಪಿಕೊಂಡಿರುತ್ತಾನೆ ಎನ್ನುವುದು ಸರಿಯಲ್ಲ. ಚಾಸಾ -1 ವಿಚಾರಿಸಿದಾಗ ಆರೋಪಿ ತನ್ನ ಬಳಿ ಗಾಂಜಾ ಮಾರಾಟ ಮಾಡಲು ಮತ್ತು ಸಾಗಾಟ ಮಾಡಲು ಪರವಾನಿಗೆ ಇಲ್ಲ ಎಂದು ಒಪ್ಪಿಕೊಂಡಿರುತ್ತಾನೆ ಎನ್ನುವುದು ಸರಿಯಲ್ಲ. ಚಾಸಾ -1 ವಿಚಾರಿಸಿದಾಗ ಆರೋಪಿ ತನ್ನ ಅಂಗ ಶೋಧನೆಯನ್ನು ಪತ್ರಾಂಕಿತ

ಅಧಿಕಾರಿಯಿಂದ ಮಾಡಿಸಬೇಕು ಎಂದು ಉತ್ತರಿಸಿದನು ಎನ್ನುವುದು ಸರಿಯಲ್ಲ. ನಮ್ಮೊಡನೆ ಇದ್ದ ಚಾಸಾ -2 ತಾನು ಪತ್ರಾಂಕಿತ ಅಧಿಕಾರಿ ಎಂದು ಅರೋಪಿಗೆ ಪರಿಚಯಿಸಿಕೊಂಡು ತನ್ನ, ಪಂಚರ ಮತ್ತು ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಪರಸ್ಪರ ಅಂಗ ಶೋಧನೆ ಮಾಡಿ ಯಾವುದೇ ನಿಷೇದಿತ ಅಮಲು ಪದಾರ್ಥ ಇಲ್ಲ ಎಂದು ಖಚಿತಪಡಿಸಿಕೊಂಡರು ಎನ್ನುವುದು ಸರಿಯಲ್ಲ. ನಂತರ ಆರೋಪಿಯ ಕೈಯಲ್ಲಿ ಶೋಲ್ಡರ್ ಬ್ಯಾಗ್ ಪರಿಶೀಲಿಸಿದಾಗ ಅದರಲ್ಲಿ ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಗಾಂಜಾ ಇದ್ದದ್ದು ಕಂಡುಬಂದು, ಅದನ್ನು ತೂಕ ಮಾಡಿ ನೋಡಿದಾಗ 2 ಕೆಜಿ 142 ಗ್ರಾಂ ಇದ್ದದ್ದು ಕಂಡುಬಂದಿತು ಎನ್ನುವುದು ಸರಿಯಲ್ಲ. ಚಾಸಾ -1 ನಮ್ಮ ಎದುರಿಗೆ ಸದರಿ ಗಾಂಜಾವನ್ನು ಪ್ಲಾಸ್ಟಿಕ್ ಚೀಲದ ಸಮೇತ ಬಿಳಿ ಬಟ್ಟೆಯಲ್ಲಿ ಸುತ್ತಿ, ಹೊಲಿದು, ಡಿಸಿಬಿ ಎನ್ನುವ ಅರಗು ಸೀಲು ಹಾಕಿ, ನನ್ನ, ಸಹ ಪಂಚನ ಮತ್ತು ಚಾಸಾ -2 ಇವರ ಸಹಿ ಇರುವ ಚೀಟಿ ಅಂಟಿಸಿ ಎ ಎಂದು ಗುರುತಿಸಿದರು ಎನ್ನುವುದು ಸರಿಯಲ್ಲ. ಅದೇ ರೀತಿ ಆರೋಪಿಯ ಅಂಗಿಯ ಎಡ ಜೇಬಿನಲ್ಲಿ ಇದ್ದ ವೀವೋ ಮೊಬೈಲ್ ಪೋನ್ ನನ್ನು ಸಹ ಅದೇ ರೀತಿ ವಶಪಡಿಸಿಕೊಂಡು ನಮ್ಮ ಸಹಿ ಇರುವ ಚೀಟಿ ಅಂಟಿಸಿ ಬಿ ಎಂದು ಗುರುತಿಸಿದರು ಎನ್ನುವುದು ಸರಿಯಲ್ಲ. ಅದೇ ಸಮಯದಲ್ಲಿ ಆರೋಪಿಯ ಬಳಿ ಇದ್ದ ನೀಲಿ ಬಣ್ಣದ ಶೋಲ್ಡರ್ ಬ್ಯಾಗ್ ಅನ್ನು ಸಹ ವಶಪಡಿಸಿಕೊಂಡರು ಎನ್ನುವುದು ಸರಿಯಲ್ಲ. ಈ ಕುರಿತು ಸಂಜೆ 4-30 ರಿಂದ 6 ಗಂಟೆಯವರೆಗೆ ಸ್ಥಳದಲ್ಲಿ ವಿವರವಾದ ಪಂಚನಾಮೆಯನ್ನು ನಿಪಿ-4 ರಂತೆ ನನ್ನ ಹಾಗೂ ಸಹ ಪಂಚನ ಎದುರಿಗೆ ಬರೆದು ನನ್ನ, ಸಹ ಪಂಚನ ಮತ್ತು ಚಾಸಾ -2 ಹಾಗೂ ಹಾಜರಿದ್ದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಸಹಿ ಪಡೆದುಕೊಂಡರು ಎನ್ನುವುದು ಸರಿಯಲ್ಲ. ಅದೇ ಸಮಯದಲ್ಲಿ ಈಗ ನೋಡಿದ ನಿಪಿ-7 ರಿಂದ 10 ರಂತೆ ಪೋಟೋ ತೆಗೆದಿದ್ದಾರೆ ಎನ್ನುವುದು ಸರಿಯಲ್ಲ.

3) ಅದೇ ಸಮಯದಲ್ಲಿ ಮಾದರಿ ಸೀಲು ತಯಾರಿಸಿ ನಮಗೆ ಕೊಟ್ಟು ನಿಪಿ-5 ರಂತೆ ರಶೀತಿ ಪಡೆದುಕೊಂಡಿದ್ದಾರೆ ಎನ್ನುವುದು ಸರಿಯಲ್ಲ. ಅದೇ ದಿನ ಆರೋಪಿ ಮತ್ತು ಮುದ್ದೆಮಾಲಿನೊಡನೆ ಠಾಣೆಗೆ ಮರಳಿದ ನಂತರ ನಾನು ನನ್ನ ವಿವರವಾದ ಹೇಳಿಕೆಯನ್ನು ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-12 ಎಂದು ಗುರುತಿಸಿತು.

4) ನನ್ನ ಹಾಗೂ ಸಹ ಪಂಚನ ಮುಂದೆ ಪೊಲೀಸರು ಆರೋಪಿ ಮೇಲೆ ದಾಳಿ ಮಾಡಿ ಆತನಿಂದ ಗಾಂಜಾ, ಮೊಬೈಲ್ ಮತ್ತು ಶೋಲ್ಡರ್ ಬ್ಯಾಗ್ ಅನ್ನು ಪಂಚನಾಮೆ ಅಡಿಯಲ್ಲಿ ವಶಪಡಿಸಿಕೊಂಡಿದ್ದರೂ ಸಹ ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಪಾಟಿಸವಾಲುಃ ಆರೋಪಿ ಪರ ಶ್ರೀ ಟಿ.ವಿ.ಕೆ.ಎಸ್ ವಕೀಲರಿಂದ ಇಲ್ಲ ಎಂದು ಸಲ್ಲಿಸಿದ್ದಾರೆ

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಶಾಂತವೀರ ಶಿವಪ್ಪ)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.